ದಿನಾಂಕಃ **28.03.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಯು.ಎಸ್. ವಕೀಲರಿಂದಃ-

ನಿಪಿ-19 ರಲ್ಲಿ ಲಗತ್ತ ಆಗಿ ಅಡಕವಾಗಿರುತ್ತದೆ ಎಂದು ಹೇಳಲಾದ ಛಾಯ ಚಿತ್ರವನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-20 ರಲ್ಲಿ ಕಂಡು ಬರುವ ಬೇಲಿಯು ಸುಮಾರು 10-20 ವರ್ಷಗಳಿಂದ ಅಸ್ಥಿತ್ವದಲ್ಲಿ ಇತ್ತು ಎಂದರೆ ಸಾಕ್ಷಿಯ ಇತ್ತೀಚಿನ 2 ವರ್ಷಗಳ ಹಿಂದೆ ಅದನ್ನು ಒತ್ತಾಯಪೂರ್ವಕವಾಗಿ ದೌರ್ಜನ್ಯದಿಂದ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಬೇಲಿಯನ್ನು ಯಾವಾಗ ಹಾಕಿರುತ್ತಾರೆ ಎಂಬ ಪ್ರಶ್ನೆಗೆ ನಮ್ಮ ಮನೆಯನ್ನು ನಿರ್ಮಿಸಿ ಸುಮಾರು 8-10 ವರ್ಷಗಳ ನಂತರ ಸದರಿ ಬೇಲಿಯನ್ನು ನಿರ್ಮಿಸಿರುತ್ತಾರೆ. ಸದರಿ ಬೇಲಿಯನ್ನು ನಿರ್ಮಿಸುವ ಸಮಯದಲ್ಲಿ ನಾನು ಪೋಲಿಸ್ ಠಾಣೆಗೆ ಮತ್ತು ಪಂಚಾಯತಿಗೆ ಅರ್ಜಿಯನ್ನು ಸಲ್ಲಿಸಿರತ್ತೇನೆ. ಸದರಿ ದಾಖಲೆಗಳನ್ನು ನಾನು ಅಸಲು ದಾವಾ ಸಂಖ್ಯೆ 389/2024 ರಲ್ಲಿ ಹಾಜರು ಪಡಿಸಿರುತ್ತೇನೆ. ನನ್ನ ಮನೆಯನ್ನು 2013 ನೇ ಸಾಲಿನಲ್ಲಿ ನಿರ್ಮಿಸಿರುತ್ತೇನೆ. ನಿಪಿ-4 ರಿಂದ 17 ರ ಭಾವ ಚಿತ್ರಗಳು ಅಸಲು ದಾವಾ ಸಖ್ಯೆ 389/2024 ರ ಭಾವ ಚಿತ್ರಗಳು ಪೂರ್ವದ ಭಾವ ಚಿತ್ರಗಳು ಎಂದರೆ ಅದರಲ್ಲಿ ದಾವಾ ಹೂಡುವ ಪೂರ್ವದಲ್ಲಿ ಮತ್ತು ನಂತರದಲ್ಲಿ ತೆಗೆದ ಭಾವ ಚಿತ್ರಗಳು ಇದೆ ಎಂದು ನುಡಿಯುತ್ತಾರೆ.

ದಾವೆಯನ್ನು ಹೂಡುವ ಸಮಯದಲ್ಲಿ ಸಂಪಲು ಇದ್ದ ಬಗ್ಗೆ ನನ್ನ ಬಳಿ ದಾಖಲಾತಿಗಳು ಇವೆ. 1965 ನೇ ಇಸವಿಯ ಪಂಚಾಯತಿ ದಾಖಲೆಗಳಲ್ಲಿ ಎರಡು ಮನೆಗಳ ಮಧ್ಯ ಭಾಗದಲ್ಲಿ ಸಂಪಲು ಇದ್ದ ಬಗ್ಗೆ ದಾಖಲೆಗಳು ಇರುತ್ತವೆ. ಸದರಿ ದಾಖಲೆಗಳನ್ನು 2023-24 ರಲ್ಲಿ ನಾನು ಪರಿಶೀಲನೆ ಮಾಡಿರುತ್ತೇನೆ. ಅಸಲು ದಾವಾ ಸಂಖ್ಯೆ 389/2024 ರಲ್ಲಿ ಸದರಿ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನಮ್ಮ ಕುಟುಂಬದಲ್ಲಿ ಆದ ವಿಭಾಗದಲ್ಲಿ ಸಂಪಲು ಇರುವ ಬಗ್ಗೆ ತೋರಿಸಿರುತ್ತಿರೋ ಇಲ್ಲವೊ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ದಾವೆಯನ್ನು ಸಲ್ಲಿಸಿದ ನಂತರ 2002 ನೇ ಸಾಲಿನಲ್ಲಿ ಆದ ವಿಭಾಗ ಪತ್ರವನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಪರಿಶೀಲನೆ ಮಾಡಿದಾಗ ಅದರಲ್ಲಿ ಸಂಪಲು ಇಲ್ಲ ಎಂಬ ವಿಚಾರ ನಿಮಗೆ ತಿಳಿಯಿತೋ ಇಲ್ಲವೊ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ವಿಭಾಗ ಪತ್ರದಲ್ಲಿ ಚೆಕಬಂದಿ ತಪ್ಪಾಗಿ ನಮೂದಾಗಿದೆ ಅದನ್ನು ಸರಿಪಡಿಸುವಂತೆ ಸಂಬಂಧಿಸಿದ ಪ್ರಾಧಿಕಾರಕ್ಕೆ ಅರ್ಜಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಹಿಂದಿನಿಂದಲೂ ಪ್ರತಿವಾದಿಗಳು ಸ್ವಾಧೀನ ಹೊಂದಿದ ಆಸ್ತಿಯಲ್ಲಿ ಹಳೆ ಕಟ್ಟಡವನ್ನು ಕೆಡವಿ ಹೊಸದಾಗಿ ಶೆಡ್ಡನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಭಾವ ಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಂಡು ಬರುವ ಗೋಡೆಯು ನಮ್ಮ ಮನೆಯ ಗೋಡೆಗೆ ಲಗತ್ತಾಗಿರುವುದು ಕಂಡು ಬರುತ್ತದೆ ಎಂದು ಸಾಕ್ಷಿ

ಒಪ್ಪಿರುತ್ತಾರೆ. ಈ ದಾಖಲೆಯನ್ನು ಗುರುತಿಸಲು ಅರ್ಜಿದಾರರ ಪರ ವಕೀಲರು ಸಿಡಿ ಯನ್ನು ಹಾಜರು ಪಡಿಸಿಲ್ಲ ಎಂದು ತಕರಾರು ಮಾಡಿದ್ದು, ಸದರಿ ತಕರಾರಿಗೊಳಪಟ್ಟು ತೀರ್ಪಿನಲ್ಲಿ ಚರ್ಚಿಸುವ ಸಲುವಾಗಿ ನಿಡಿ-1 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ಭಾವ ಚಿತ್ರವನ್ನು ತೋರಿಸಲಾಗಿ ಸದರಿ ಭಾವ ಚಿತ್ರದಲ್ಲಿ ಗೋಡೆಯು ಉತ್ತರ ದಿಕ್ಕಿನಲ್ಲಿರುವ ಎದುರುದಾರನ ಮನೆಗೆ ಲಗತ್ತಾಗಿರುವುದು ಕಂಡು ಬರುತ್ತದೆ ಎಂದು ಒಪ್ಪಿಕೊಂಡಿದ್ದು, ಅದನ್ನು ಗುರುತಿಸುವ ಸಲುವಾಗಿ ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಭಾವ ಚಿತ್ರವನ್ನು ತೋರಿಸಲಾಗಿ ಅದರಲ್ಲಿ ಎದುರುದಾರನ ಮನೆಯ ಶೀಟಿನಿಂದ ನೀರು ಹೋಗುವ ಸಲುವಾಗಿ ದಂಬೆ ಹಾಕಿರುವುದು ಕಂಡು ಬಂದಿದ್ದು, ಸಾಕ್ಷಿಯು ಸದರಿ ದಂಬೆಯನ್ನು ಸರಿಯಾಗಿ ಹಾಕಿರುವುದಿಲ್ಲ ಎಂದು ಹೇಳಿರುತ್ತಾರೆ. ಆದರಿಂದ ನೀರು ನಮ್ಮ ಮನೆಯ ಒಳಗಡೆ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ಭಾವ ಚಿತ್ರವನ್ನು ನಿಡಿ-3 ಎಂದು ಗುರುತಿಸಲಾಯಿತು. ನಾನು ನಿರ್ಮಿಸಿದ ಮನೆಯ ವಿಸ್ತೀರ್ಣ 75X18. ಮನೆಯ ಅಸಸಮೆಂಟ ದಾಖಲೆಗಳಲ್ಲಿ 75X18 ಎಂದು ನಮೂದಾಗಿರುತ್ತದೆ. ನಾನು ಸೆಟಬ್ಯಾಂಕ್ ಮನೆ ಕಟ್ಟಿಲ್ಲ ಎಂದರೆ ಸಾಕ್ಷಿಯು ನಮಗೆ ಸೇರಿದ ಜಾಗದಲ್ಲಿ ಮನೆ ಕಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಾನು ಕಾನೂನು ಉಲ್ಲಂಘನೆ ಮಾಡಿ ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ಕಂಡು ಬರುವ ಬೇಲಿಯವರೆಗು ನಮ್ಮ ಮನೆ ಇರುತ್ತದೆ ಎಂದರೆ ಸರಿ. ನಿಡಿ-2 ರ ಬೇಲಿಯವರೆಗೆ ಮಾತ್ರ ನನ್ನ ಜಾಗ ಇರುತ್ತದೆ ಎಂದರೆ ಸರಿಯಲ್ಲ. ಪೂರ್ವ-ಪಶ್ಚಿಮ ವಾಗಿ ನಿರ್ಮಿಸಿದ ಮನೆಯ ಜಾಗ ನನಗೆ ಸೇರಿದ ಜಾಗ ಇರುತ್ತದೆ ಎಂದರೆ ಸರಿ. ನಮ್ಮ ಮನೆಯ ಪೂರ್ವ-ಪಶ್ಚಿಮಕ್ಕೆ ಯಾವುದೆ ಜಾಗವನ್ನು ಖಾಲಿ ಬಿಟ್ಟಿಲ್ಲ ಎಂದರೆ ಸಾಕ್ಷಿ ಪೂರ್ವ-ಪಶ್ಚಿಮಕ್ಕೆ ರಸ್ತೆ ಇದ್ದು, ಆ ರಸ್ತೆಯನ್ನು ಬಿಟ್ಟು ಮನೆ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಉತ್ತರ-ದಕ್ಷಿಣಕ್ಕು ಜಾಗ ಬಿಟ್ಟು ಮನೆ ಕಟ್ಟಿಲ್ಲ ಎಂದರೆ ಸಾಕ್ಷಿಯು ಸಂಪಲನ್ನು ಬಿಟ್ಟು ಮನೆ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಿಡಿ-2 ರಲ್ಲಿ ಕಂಡು ಬರುವ ಬೇಲಿಯ ದಕ್ಷಿಣ ಭಾಗಕ್ಕೆ ನನಗೆ ಸೇರಿದ ಯಾವುದೆ ಜಾಗ ಇಲ್ಲ ಎಂರೆ ಸಾಕ್ಷಿ ಅಲ್ಲಿ ಸಂಪಲು ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಅವರ ಹಳೆ ಮನೆಯನ್ನು ಕೆಡವಿ ಅದೇ ಜಾಗದಲ್ಲಿ ಕಟ್ಟಡವನ್ನು ನಿರ್ಮಿಸಿತ್ತಾರೆ ಎಂದರೆ ಸಾಕ್ಷಿ ಸಂಪಲನ್ನು ಅತೀಕ್ರಮಣ ಮಾಡಿ ಮನೆಯನ್ನುನಿರ್ಮಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಂಪಲು ಇಲ್ಲದೇ ಇರುವ ಕಾರಣ ಯಾವುದೆ ಅತೀಕ್ರಮಣ ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಸಂಪಲು ಇರುವ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸುಳ್ಳು ದಾವೆಯನ್ನುಹೂಡಿ, ನ್ಯಾಯಾಲಯದ ಆದೇಶ ಉಲ್ಲಂಘನೆಯಾಗಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.